**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :20 ಸಿಡಬ್ಲು :18

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಮತಿ. ಸುಶೀಲವ್ವ ಯಲ್ಲಪ್ಪ ಸಂದ್ರಿಮನಿ |
| ಗಂಡನ ಹೆಸರು | : | ಶ್ರೀ.ಯಲ್ಲಪ್ಪ ಸಂದ್ರಿಮನಿ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ್ತವ್ಯ | : | ಮುಗಳಖೋಡ |
| ದಿನಾಂಕ | : | 29-09-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ಬಸಪ್ಪ ಮಾದರ ನಮ್ಮ ಓಣಿಯವರು. ಚಾಸಾಃ 8 ರಿಂದ ಚಾಸಾಃ 17, ಚಾಸಾಃ 19 ರಿಂದ ಚಾಸಾಃ 34 ನಮ್ಮ ಓಣಿಯವರು, ನನಗೆ ಗೊತ್ತಿರುತ್ತಾರೆ. ನಾನು ಹಿಂದೂ ಧರ್ಮದ ಪರಿಶಿಷ್ಟ ಜಾತಿಯ ಮಾದರ ಜನಾಂಗಕ್ಕೆ ಸೇರಿದ್ದೇನೆ.

2. ಆರೋಪಿತರು ಮುಗಳಖೋಡ ಗ್ರಾಮದವರು. ಅವರು ಜೈನರು. ಅವರನ್ನು ಬಾಬನ್ನವರು ಎಂದು ಕರೆಯುತ್ತೇವೆ. ನಮ್ಮ ಮನೆಯ ಹತ್ತಿರ ರಸ್ತೆಯಲ್ಲಿ ದೇವರ ಪಾದುಕಟ್ಟೆ ಇದ್ದು, ಅದು ಸರ್ಕಾರಿ ಜಾಗ ಆಗಿರುತ್ತದೆ. ನಮ್ಮ ಸಮಾಜದವರು ಸೇರಿ ಆ ಜಾಗದಲ್ಲಿ ಭವನ ಕಟ್ಟಬೇಕೆಂದು ಬಯಸಿದ್ದೇವು. ಸದರಿ ಜಾಗದಲ್ಲಿ 8 ವರ್ಷಗಳ ಹಿಂದೆ ಆರೋಪಿತರು ಮನೆ ಕಟ್ಟಲು ಕಬ್ಬಿಣದ ಸರಳುಗಳನ್ನು ನಿಲ್ಲಿಸುತ್ತಿದ್ದರು, ಆ ಕಾರಣ ದುರ್ಗಪ್ಪ ಪೂಜೇರಿ ಎನ್ನುವವರು ನಮ್ಮ ಮನೆಗೆ ಬಂದು ಪುರಸಭೆಗೆ ಹೋಗೋಣ ಎಂದು ಕರೆದರು. ಒಂದೊಂದು ಮನೆಯಿಂದ ಒಬ್ಬಬ್ಬೊರು ಬನ್ನಿ ಎಂದು ಕರೆದಿದ್ದರು. ನಾನೂ ಸಹ ಹೋಗಿದ್ದೇನು.

3. ನಾವು ಮುನ್ಸಿಪಾಲ್ಟಿಗೆ ಹೋದಾಗ ಬೆಳಗ್ಗೆ 10:00 ಗಂಟೆ ಆಗಿತ್ತು. ನಾವು ಚೀಫ್ ಆಫೀಸರನ್ನು ಭೇಟಿ ಮಾಡಿ ಆರೋಪಿತರು ಕಟ್ಟಡ ಕಟ್ಟುತ್ತಿದ್ದಾರೆ ಎಂದು ಅರ್ಜಿ ಕೊಟ್ಟೇವು. ಬೆಳಗ್ಗೆ 11:00 ಗಂಟೆಗೆ ಸ್ಥಳಕ್ಕೆ ಚೀಫ್ ಆಫೀಸರವರು ಬಂದರು. ನಾವು ಮುನ್ಸಿಪಾಲ್ಟಿಯಿಂದ ಸ್ಥಳಕ್ಕೆ ಬಂದೇವು. ಚೀಫ್ ಆಫೀಸರವರು ಕಟ್ಟಡ ಕಟ್ಟಬಾರದು ಎಂದು ಹೇಳಿದರು. ಚೀಫ್ ಆಫೀಸರವರಿಗೂ ಮತ್ತು ನಮಗೂ ಆರೋಪಿತರು ಬೈದರು. ಆರೋಪಿತರು ನಮಗೆ ಜಾತಿ ಎತ್ತಿ ಬೈದರು.

4. ಪ್ರಕಾಶ ಎನ್ನುವವರು ಕಲ್ಲು ಗುಡ್ಡೆಯ ಮೇಲಿಯ ಪಾಯದ ಒಳಗೆ ಬಿದ್ದರು. ನಮ್ಮ ಜನರು ಆತನನ್ನು ಎಬ್ಬಿಸಲು ಹೋದರು. ಆರೋಪಿತರು ನಮಗೆ ಜಾತಿ ಹೆಸರು ತೆಗೆದು ಬೈಯುತ್ತಾ ಚಡಿಯಿಂದ[ಕಬ್ಬಿಣದ ರಾಡ್], ಬಿದಿರು ಬಡಿಗೆ ಮತ್ತು ಕಲ್ಲುಗಳಿಂದ ಹೊಡೆಯಲು ಶುರುಮಾಡಿದರು. ಆ ಸಮಯದಲ್ಲಿ 4–5 ಜನ ಗಂಡಸರಿಗೆ, 10 ಜನ ಹೆಣ್ಣುಮಕ್ಕಳಿಗೆ ಪೆಟ್ಟು ಬಿತ್ತು. 4ನೇ ಆರೋಪಿ ನನಗೆ ಕೈ ಹಿಡಿದು ಜಗ್ಗಾಡಿದರು, ಕೈಯಿಂದ ಹಿಡಿದು ತಳ್ಳಿದರು, ನಾನು ಕೆಳಗೆ ಬಿದ್ದೇನು, ಆಗ 4ನೇ ಆರೋಪಿ ಪ್ರವೀಣ ನನಗೆ ಕಲ್ಲುಗಳಿಂದ ಹೊಡೆದರು. ನನಗೆ ಕೈಗೆ ಮತ್ತು ಕಾಲುಗಳಿಗೆ ಗಾಯಗಳಾಗಿದ್ದವು. ನಂತರ ನಮ್ಮ ಊರಿನವರು ನಮ್ಮನ್ನು ಗಾಡಿಯಲ್ಲಿ ಹಾರೂಗೇರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಹೆಚ್ಚು ಗಾಯ ಆಗಿದ್ದವರಿಗೆ ನಾರಗೊಂಡ ಆಸ್ಪತ್ರೆಗೆ ಕರೆದುಕೊಂಡ ಹೋಗಲಾಯಿತು. ನಾನೂ ಸಹ ನಾರಗೊಂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ.

5. ಘಟನೆಯ ಬಗ್ಗೆ ಬಸಪ್ಪ ಅವರು ದೂರು ಕೊಟ್ಟಿದ್ದಾರೆ. ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿರುವ ಆರೋಪಿತರೇ ಆ ದಿನ ಘಟನೆಯಲ್ಲಿ ಭಾಗವಹಿಸಿ ನಮಗೆ ಹಲ್ಲೆ ಮಾಡಿದವರಾಗಿರುತ್ತಾರೆ. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಭೇಟಿ ನೀಡಿದ್ದರು. ಆಸ್ಪತ್ರೆಯಲ್ಲಿ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ನಾನು ನಾರಗೊಂಡ ಆಸ್ಪತ್ರೆಯಲ್ಲಿ 10 ದಿನ ಒಳರೋಗಿಯಾಗಿದ್ದೇನು.

6. ನಾನು ರಾಯಬಾಗ ಕೋರ್ಟಗೆ ಹೋಗಿ ಅಲ್ಲಿ ಜಡ್ಜ ಅವರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ. ಆರೋಪಿತರು ನಮಗೆ ಹೊಡೆದ ಕಬ್ಬಿಣದ ರಾಡ್, ಕಲ್ಲು ಮತ್ತು ಬಡಿಗೆಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಕಬ್ಬಿಣದ ಸರಳು, ಬಿದಿರಿನ ಬಡಿಗೆ ಮತ್ತು ಕಲ್ಲುಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ಮು.ಮಾ.1 ರಿಂದ ಮು.ಮಾ.3 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ</u>**

ನಾನು ಬೆಳಗ್ಗೆ 9:00 ಗಂಟೆಗೆ ಕೂಲಿ ಕೆಲಸಕ್ಕೆ ಹೋದರೆ ಸಂಜೆ 8:00ಗಂಟೆಗೆ ಬರುತ್ತೇನೆ. ಚಾಸಾಃ 1 ಬಸಪ್ಪ , ಚಾಸಾಃ 10 ಜಯಪಾಲ, ಚಾಸಾಃ 13 ವಿಠ್ಠಲ ಮಾದರ, ಚಾಸಾಃ 16 ಭೀಮಪ್ಪ ಮಾದರ, ಚಾಸಾಃ 17 ಧನಪಾಲ ಮಾದರ ಇವರು ಅಣ್ಣತಮ್ಮಂದಿರುಗಳಾಗಿದ್ದು, ಇವರು 1ನೇ ಆರೋಪಿ, 4ನೇ ಆರೋಪಿ , 6 ನೇ ಆರೋಪಿ, 7ನೇ ಆರೋಪಿ ಮತ್ತು 9ನೇ ಆರೋಪಿತರಿಂದ ಈ ಹಿಂದೆ ನಿವೇಶನವನ್ನು ಖರೀದಿ ತೆಗೆದುಕೊಂಡು ಹಾಲಿ ವಾಸ ಇರುವ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

2. ಮಹಾವೀರ ಕುರಾಡೆ ಎನ್ನುವವರು ನಮ್ಮ ಸಂಬಂಧಿಕರು ಅಲ್ಲ. ಕುರಾಡೆ ಎನ್ನುವವರು 1ನೇ ಆರೋಪಿ ಮತ್ತು ಅವರ ಕುಟುಂಬದವರಿಂದ 50–60 ವರ್ಷಗಳ ಹಿಂದೆ ನಿವೇಶನ ಖರೀದಿಸಿ ಹಾಲಿ ವಾಸ ಇರುವ ಮನೆ ಕಟ್ಟಿಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ವಿವಾದಿತ ಜಾಗ ಬಾಬನ್ನವರ ಕುಟುಂಬಕ್ಕೆ ಸೇರಿದ್ದು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಅದು ಸರ್ಕಾರದವರ ಜಾಗ ಎಂದು ಹೇಳಿದ್ದಾರೆ. ಮುನ್ಸಿಪಾಲ್ಟಿಯಿಂದ ಅನುಮತಿ ಪಡೆದು ಕಟ್ಟಡ ಕಟ್ಟುತ್ತಿದ್ದರು ಎನ್ನುವುದಕ್ಕೆ ಸಾಕ್ಷಿ ಚೇಫ್ ಆಫೀಸರ ಕಟ್ಟಡ ಕಟ್ಟಬಾರದು ಎಂದು ಹೇಳಿದ್ದಾರೆ ಎಂದು ಉತ್ತರಿಸಿದ್ದಾರೆ.

3. ನ್ಯಾಯಾಲಯಕ್ಕೆ ನನಗೆ ಚಾಸಾಃ1 ಬಸಪ್ಪ ಅವರು ಕರೆದುಕೊಂಡು ಬಂದಿದ್ದಾರೆ ಎನ್ನುವುದು ಸರಿ. ಬಸಪ್ಪ ಅವರು ಹೇಳಿಕೊಟ್ಟ ಪ್ರಕಾರ ನಾನು ಇಂದು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನಗೆ ಓದಲು, ಬರೆಯಲು ಬರುವುದಿಲ್ಲ ಎನ್ನುವುದು ಸರಿ. ನನ್ನ ಹೇಳಿಕೆಯಲ್ಲಿ ಪೋಲಿಸರು ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ, ಆದರೆ ನಾನು ನಡೆದಿದ್ದನ್ನು ಹೇಳುತ್ತಿದ್ದೇನೆ.

4. ರಾಯಬಾಗ ನ್ಯಾಯಾಲಯದಲ್ಲಿ ಪೋಲಿಸರು ಹೇಳಿಕೊಟ್ಟ ಪ್ರಕಾರ ನೀವು ಹೇಳಿಕೆ ನೀಡಿದ್ದೀರಿ ಎನ್ನುವುದಕ್ಕೆ ಸಾಕ್ಷಿ ನಾನು ನಡೆದಿದ್ದನ್ನು ಹೇಳಿದ್ದೇನೆ ಎಂದು ಹೇಳಿದ್ದಾರೆ. ಪುರಸಭೆಗೆ ನಾನು 10:00ಗಂಟೆಗೆ ಹೋಗಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ನಾನು ಸ್ಥಳದಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ಚಾಸಾಃ1, ಚಾಸಾಃ 10, ಚಾಸಾಃ 13, ಚಾಸಾಃ 16 ಮತ್ತು ಚಾಸಾಃ 17 ರವರಿಗೆ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 4ನೇ ಆರೋಪಿ ನನಗೆ ಹೊಡೆದನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

5. ಘಟನೆಯಲ್ಲಿ ನನಗೆ ಗಾಯಗಳಾಗಿಲ್ಲ, ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ನಮ್ಮ ಜಾತಿ ಹೆಸರು ಹಿಡಿದು ಬೈದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮು.ಮಾ.1 ರಿಂದ 3 ರಂತಹ ವಸ್ತುಗಳು ಸಾಮಾನ್ಯವಾಗಿ ಮನೆ ಕಟ್ಟುವ ಸ್ಥಳಗಳಲ್ಲಿ ಸಿಗುತ್ತವೆ ಎನ್ನುವುದು ಸರಿ.

6. ಮು.ಮಾ.1 ರಿಂದ 3 ವಸ್ತುಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ಅವುಗಳಿಂದ ನಮಗೆ ಹೊಡೆದಿದ್ದಾರೆ

ಎಂದು ಹೇಳಿದ್ದಾರೆ. ಚಾಸಾಃ 1, ಚಾಸಾಃ 10, ಚಾಸಾಃ 13, ಚಾಸಾಃ 16 ಮತ್ತು ಚಾಸಾಃ 17 ರವರಿಗೆ ಸಹಾಯ ಮಾಡಲು ಅವರು ಹೇಳಿಕೊಟ್ಟ ಪ್ರಕಾರ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾಃ 1 ಬಸಪ್ಪ ರವರು ಆರೋಪಿತರ ಮೇಲೆ ಸಿವಿಲ್ ಕೇಸ ಹಾಕಿದ್ದರು ಎನ್ನುವುದು ಸರಿ. ಆರೋಪಿತರು ವಿವಾದಿತ ಸ್ಥಳದ ಮಾಲೀಕರಾಗಿದ್ದರೂ ಸಹ ನಾವು ಆ ಸ್ಥಳವನ್ನು ಪಡೆದುಕೊಳ್ಳುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಕೇಸ ಮಾಡಿದ್ದೇವೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರಿಂದ</u>**

3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ ವಕೀಲರು ಮಾಡಿದ ಪಾಟೀ ಸವಾಲನ್ನು 1 ಮತ್ತು 2 ನೇ ಆರೋಪಿತರ ಪರ ಶ್ರೀ.ಬಿ.ಜೆ.ಜಿ. ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.